

## ಮಹಿಳಾ ಗೋಡೆ

ಶಬರಿಮಲೆಗೆ ಮಹಿಳೆಯರಿಗೆ ಪ್ರವೇಶ ಕಲ್ಪಿಸಿದ್ದನ್ನು ವಿರೋಧಿಸಿ ಕೇರಳದಲ್ಲಿ ಉಂಟಾದ ಹೋರಾಟ, ಪ್ರತಿಭಟನೆಗಳು ಅಷ್ಟಿಷ್ಟಲ್ಲ. ದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದ ಮಹಿಳೆಯರ ಮೇಲೆ ಅಕ್ಷರಶಃ ದಬ್ಬಾಳಿಕೆ ನಡೆದಿತ್ತು. ಸುಪ್ರೀಂ ಕೋರ್ಟ್ ತೀರ್ಪನ್ನು ಪಾಲಿಸಲು ಬದ್ಧವಾದ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಒಂದೆಡೆಯಾದರೆ ಮಹಿಳೆಯರು ಶಬರಿಮಲೆ ದೇವಾಲಯಕ್ಕೆ ಪ್ರವೇಶಿಸುವುದರಿಂದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟಾಗುತ್ತದೆ ಎಂದು ವಾದಿಸುವ ಜನರ ಗುಂಪು ದೊಡ್ಡದೇ ಇತ್ತು.

ಇದೆಲ್ಲದರ ನಡುವೆ 2019 ಜನವರಿ 1 ಹೊಸವರ್ಷದಂದು ಕೇರಳ ಸರ್ಕಾರ ವನಿತಾ ಮದಿಲ್ (ಮಹಿಳೆಯರ ಗೋಡೆ) ಎಂಬ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದಾಗ ಸಾವಿರಾರು ಸಂಖ್ಯೆಯಲ್ಲಿ ಬಂದ ಮಹಿಳೆಯರು ರಸ್ತೆಗಳುದ್ದಕ್ಕೂ ಕೈ ಕೈ ಹಿಡಿದು ಗೋಡೆ ನಿರ್ಮಿಸಿದ್ದರು. ಈ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಮಹಿಳೆಯರು ಮಾಡಿದ ಶಕ್ತಿ ಪ್ರದರ್ಶನ ಇದಾಗಿತ್ತು.

ಮುಂದೆ ಬಂದಿದ್ದರು. ಅವರಿಗೆ ನಾಳೆಯ ಬದುಕಿನ ಬಗ್ಗೆ ಚಿಂತೆಯಿತ್ತು. ಅಂದು ಮಹಿಳೆಯರು ಎತ್ತಿದ ದನಿ ಈಗಲೂ ಅಲ್ಲಿ ಪ್ರತಿಧ್ವನಿಸುತ್ತಲೇ ಇದೆ.

### ಭೋಪಾಲ ದುರಂತ

1984, ಮಧ್ಯಪ್ರದೇಶದ ಭೋಪಾಲದಲ್ಲಿ ವಿಷಾನಿಲ ಸೋರಿಕೆಯಾಗಿ ದುರಂತ ಸಂಭವಿಸಿ ಎಲ್ಲವನ್ನೂ ಕಳೆದುಕೊಂಡು ಬದುಕು ಬೀದಿಗೆ ಬಂದಾಗ ನಮಗೆ ನ್ಯಾಯ ಕೊಡಿ ಎಂದು ಬೀದಿಗಿಳಿದು ಹೋರಾಟ ಮಾಡಿದವರು ಅಲ್ಲಿನ ಮಹಿಳೆಯರು. ಸುಮಾರು 16,000ಕ್ಕಿಂತಲೂ ಹೆಚ್ಚು ಮಂದಿ ಈ ದುರಂತದಲ್ಲಿ ಪ್ರಾಣ ಕಳೆದುಕೊಂಡರು. ಹೀಗೆ ಪ್ರಾಣ ಕಳೆದುಕೊಂಡವರ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ ರೂಪುಗೊಂಡ ಚಳವಳಿಯ ಮುಂಚೂಣಿಯಲ್ಲಿ ಚಂಪಾದೇವಿ ಶುಕ್ಲಾ ಹಾಗೂ ರಶೀದಾ ಬೀ ಕಾಣಿಸಿಕೊಂಡರು. ಈ ಇಬ್ಬರ ಹೋರಾಟ ಅಂತರರಾಷ್ಟ್ರೀಯ ಗಮನವನ್ನೂ ಸೆಳೆಯಿತು. ಇಬ್ಬರ ಹೋರಾಟಕ್ಕೆ 'ದಿ ಗೋಲ್ಡ್‌ಮನ್ ಎನ್ವಿರಾನ್‌ಮೆಂಟ್ ಪ್ರಶಸ್ತಿ'ಯ ಗೌರವ ದೊರೆತಿದೆ. ಭೋಪಾಲದ ವಾತಾವರಣದಲ್ಲಿ ಈಗಲೂ ವಿಷಾನಿಲವಿದೆ. ಅಲ್ಲಿ ಹುಟ್ಟುವ ಮಗು ಅಂಗವೈಕಲ್ಯದಿಂದ ಬಳಲುತ್ತಿದೆ. ಒಂದಲ್ಲ ಒಂದು ರೀತಿಯಲ್ಲಿ ಮಹಿಳೆಯರ ಹೋರಾಟ ಅಲ್ಲಿನ್ನೂ ಜೀವಂತವಾಗಿದೆ.

### ನರ್ಮದಾ ಬಚಾವೊ

1985ರಲ್ಲಿ ನರ್ಮದಾ ಬಚಾವೊ ಆಂದೋಲನ ನಡೆದಿತ್ತು. ಮಹಿಳೆಯರ ನೇತೃತ್ವದಲ್ಲಿ ನಡೆದ ಜಗತ್ತಿನ ಅತೀ ದೊಡ್ಡ ಚಳವಳಿ ಅದಾಗಿತ್ತು. ಗುಜರಾತ್, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ಈ ಮೂರು ರಾಜ್ಯಗಳಲ್ಲಿ ಹರಿಯುವ ನರ್ಮದಾ ನದಿಗೆ ಅಡ್ಡವಾಗಿ ನಿರ್ಮಾಣ ಮಾಡುವ ಅಣೆಕಟ್ಟು ವಿರುದ್ಧ ಮೇಧಾ ಪಾಟ್ಕರ್ ನೇತೃತ್ವದಲ್ಲಿ ಆ ಚಳವಳಿ ಆರಂಭವಾಗಿತ್ತು. ಅಣೆಕಟ್ಟು ಯೋಜನೆಗಾಗಿ 32,000 ಜನರನ್ನು ಸ್ಥಳಾಂತರಿಸಲಾಗಿತ್ತು . ಅವರಿಗೆ ಪರಿಹಾರ ನಡಬೇಕು ಎಂಬ ಒತ್ತಾಯವೂ ಈ ಚಳುವಳಿಯದ್ದಾಗಿತ್ತು. ಈ ಯೋಜನೆಯ ಪ್ರಾಯೋಜಕರಲ್ಲಿ ಒಬ್ಬರಾಗಿದ್ದ ವಿಶ್ವಬ್ಯಾಂಕ್ 1993ರಲ್ಲಿ ತಮ್ಮ ಹೂಡಿಕೆಯನ್ನು ವಾಪಸ್ ಪಡೆದಿತ್ತು. 2017ರಲ್ಲಿ ಸುಪ್ರೀಂಕೋರ್ಟ್ ಮಧ್ಯಪ್ರದೇಶದಲ್ಲಿ ಸ್ಥಳಾಂತರ ಮಾಡಿದ 681 ಜನರಿಗೆ ಪರಿಹಾರ ನೀಡಲು ಆದೇಶಿಸಿತ್ತು. ಇದರ ಬೆನ್ನಲ್ಲೇ ಪಾಟ್ಕರ್ ನೇತೃತ್ವದಲ್ಲಿ ಮಹಿಳೆಯರು ಸೆಪ್ಟೆಂಬರ್ ತಿಂಗಳ ಚಳಿಯನ್ನು ಲೆಕ್ಕಿಸದೆ ಕುತ್ತಿಗೆವರೆಗೆ ನೀರಿನಲ್ಲಿ ಮುಳುಗಿ ಜಲಾಂದೋಲನ ನಡೆಸಿದ್ದರು.

ನರ್ಮದಾ ಅಣೆಕಟ್ಟು ಯೋಜನೆಯಿಂದಾಗಿ ಬದುಕು ದುಸ್ತರಗೊಂಡ ಜನರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಪಟ್ಟು ಬಿಡದೆ ಹೋರಾಡಿದ್ದ ಮೇಧಾ ಪಾಟ್ಕರ್ ಜತೆ ಗಟ್ಟಿಯಾಗಿ ನಿಂತವರೂ ಮಹಿಳೆಯರೇ ಆಗಿದ್ದರು.

### ಗಂಡಸರ ನೆರವೇ ಬೇಡವೆಂದ ಗಟ್ಟಿಗಿತ್ತಿಯರು

ಸೇಲ್ಸ್ ಗರ್ಲ್ ಆದರೇನು ಕುಳಿತುಕೊಳ್ಳಬಾರದಾ? ದಿನನಿತ್ಯ ನಿಂತುಕೊಂಡೇ ಕೆಲಸ ಮಾಡುವ ಸೇಲ್ಸ್ ಗರ್ಲ್ಸ್‌ಗೆ ಕುಳಿತುಕೊಳ್ಳಲು ಅವಕಾಶಕೊಡಿ ಎಂಬುದಕ್ಕೂ ಮಹಿಳೆಯರು ಹೋರಾಟ ನಡೆಸಬೇಕಾಗಿ ಬಂತು. ಈ ಹೋರಾಟ ನಡೆದಿದ್ದು ಕೇರಳದಲ್ಲಿ.

ಪುರುಷ ಪ್ರಾಬಲ್ಯವಿರುವ ಕಾರ್ಮಿಕರ ಸಂಘಟನೆಗಳಲ್ಲಿ ಈ ವಿಷಯ ಪ್ರಸ್ತಾಪಿಸಿದ್ದರೂ ಪ್ರಯೋಜನವಾಗಲಿಲ್ಲ. ಕೊನೆಗೆ 2009ರಲ್ಲಿ ಕೋಯಿಕ್ಕೋಡ್ ಜಿಲ್ಲೆಯ ಮಹಿಳೆಯರು 'ಪೆಣ್‌ಕುಟ್ಟ್' ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. ಕೆಲಸದ ವೇಳೆ ಮಹಿಳೆಯರಿಗೆ ಕುಳಿತುಕೊಳ್ಳಲು ಸೌಕರ್ಯ ಒದಗಿಸಬೇಕು ಮತ್ತು ಶೌಚಾಲಯದ ವ್ಯವಸ್ಥೆ ಮಾಡಿಕೊಡಬೇಕು ಎಂದು ಒತ್ತಾಯಿಸಿ ಮಹಿಳೆಯರು ಹೋರಾಟ ನಡೆಸಿದ್ದರು. ಈ ಹೋರಾಟಕ್ಕೆ ನೇತೃತ್ವ ನೀಡಿದ್ದು ವಿಜಿ. ಪಿ ಎಂಬಾಕೆ.

ಮೂತ್ರಪ್ಪುರ ಸಮರಂ (ಶೌಚಾಲಯಕ್ಕಾಗಿ ಹೋರಾಟ) ಮತ್ತು ಇರಿಕ್ಕಲ್ ಸಮರಂ (ಕುಳಿತುಕೊಳ್ಳಲಿರುವ ಹಕ್ಕು) ಎಂಬೀ ಹೋರಾಟಗಳು ಕೇರಳದಲ್ಲಿ ನಡೆದದ್ದು ಇದೇ ಮೊದಲು. 9 ವರ್ಷಗಳ ನಂತರ ಸರ್ಕಾರ ಅಂಗಡಿ, ಮಾಲ್‌ಗಳಲ್ಲಿ ಶೌಚಾಲಯ ಮತ್ತು ನೌಕರರಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಕಲ್ಪಿಸಬೇಕೆಂದು ಆದೇಶಿಸಿತು.





ಭಲೇ ಜೋಡಿ: ಭೋಪಾಲ್ ವಿಷಾನಿಲ ದುರಂತದ ಸಂತ್ರಸ್ತರಿಗೆ ಪರಿಹಾರ ಕೊಡಿಸಲು ಹೋರಾಟ ಸಂಘಟಿಸಿದ ಚಂಪಾದೇವಿ ಹಾಗೂ ರಶೀದಾ